## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Global Tech Park Pvt. Ltd., ರವರಿಗೆ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಹೊಸಕೋಟೆ ಗ್ರಾಮದಲ್ಲಿ 10 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ನಿರಾಕ್ಷೇಪಣಾ ನೀಡುವ ಬಗ್ಗೆ.

ಓದಲಾಗಿದೆ:
1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಏಕ ಕಡತ ಪದ್ಧತಿಯಡಿ ಸರ್ಕಾರಕ್ಕೆ ಸಲ್ಲಿಸಿರುವ ಕಡತ ಸಂಖ್ಯೆ: 426.
2. ದಿನಾಂಕ: 02.11.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

* * *

**ಪ್ರಸ್ತಾವನೆ :-**

M/s Global Tech Park Pvt. Ltd., ರವರಿಗೆ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಹುಲಿಕುಂಟೆ ಹೋಬಳಿಯ ಹೊಸಕೋಟೆ ಗ್ರಾಮದಲ್ಲಿ 10 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ವಂತ ಉಪಯೋಗಕ್ಕಾಗಿ ಸ್ಥಾಪಿಸಲು ಅನುಮತಿ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಯೋಜನೆಯ ಸ್ಥಳದ ವಿವರಗಳು ಮತ್ತು ಈ ಕೆಳಕಂಡ ಮಾಹಿತಿಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಏಕ ಕಡತ ಪದ್ಧತಿಯಡಿ ಮೇಲೆ ಓದಲಾದ (1) ರ ಕಡತದಲ್ಲಿ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

| | | |
|---|---|---|
| ಯೋಜನಾ ಪ್ರದೇಶದ ವಿವರ | : | ಜಿಲ್ಲೆ : ತುಮಕೂರು<br>ತಾಲ್ಲೂಕು : ಶಿರಾ<br>ಹೋಬಳಿ: ಹುಲಿಕುಂಟೆ<br>ಗ್ರಾಮ : ಹೊಸಕೋಟೆ |
| ಯೋಜನಾ ಪ್ರದೇಶದ Co-ordinate ವಿವರ | : | ಅಕ್ಷಾಂಶ: 14°.01'N<br>ರೇಖಾಂಶ: 76°.56'E |
| ಯೋಜನಾ ಜಮೀನಿನ ವಿವರ | : | ಖಾಸಗಿ ಜಮೀನು |
| ಸಮೀಪದ ಸಬ್ ಸ್ಟೇಷನ್ ವಿವರ | : | ಸಿ.ಬಿ. ಗೆರೆ, ಹುಲಿಕುಂಟೆ |
| ಕಂಪನಿಯ ಶಾಶ್ವತ ಆದಾಯ ತೆರಿಗೆ ಪಾವತಿ ಖಾತೆ ಸಂಖ್ಯೆ | : | AABCG507C |
| ಉತ್ಪಾದನೆಯಾಗುವ ವಿದ್ಯುತ್ತಿನ ಉಪಯೋಗದ ವಿಧಾನ | : | ಸ್ವಂತ ಉಪಯೋಗಕ್ಕೆ (Captive use) |
| ನಿಗದಿತ ಶುಲ್ಕ ಪಾವತಿಸಲಾಗಿದೆಯೇ | : | ಅರ್ಜಿ ನೋಂದಣಿ ಶುಲ್ಕ ಪಾವತಿಸಿದೆ |

M/s Global Tech Park Pvt. Ltd., ರವರಿಗೆ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಹುಲಿಕುಂಟೆ ಹೋಬಳಿಯ ಹೊಸಕೋಟೆ ಗ್ರಾಮದಲ್ಲಿ 10 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ವಂತ ಉಪಯೋಗಕ್ಕೆ (Captive use) ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವ ಕುರಿತಾದ ಮೇಲ್ಕಂಡ ಪ್ರಸ್ತಾವನೆಯನ್ನು ಮೇಲೆ ಓದಲಾದ (2) ರಂತೆ ದಿನಾಂಕ: 02.11.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಘಟಕ ಸ್ಥಾಪನೆಗೆ ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ. ಸದರಿ ಶಿಫಾರಸ್ಸಿನಂತೆ ಪ್ರಸ್ತಾವನೆಯನ್ನು ಅನುಮೋದಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ : ಇಎನ್ 294 ಎನ್‌ಸಿಇ 2016,**
**ಬೆಂಗಳೂರು, ದಿನಾಂಕ: 29.12.2016.**

M/s Global Tech Park Pvt. Ltd., ರವರಿಗೆ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಹುಲಿಕುಂಟೆ ಹೋಬಳಿಯ ಹೊಸಕೋಟೆ ಗ್ರಾಮದಲ್ಲಿ 10 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ವಂತ ಉಪಯೋಗಕ್ಕೆ (Captive use) ಸ್ಥಾಪಿಸಲು IPP Category ಅಡಿ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ನಿರಾಕ್ಷೇಪಣೆಯನ್ನು ನೀಡಲಾಗಿದೆ.

1. ಅಭಿವೃದ್ಧಿದಾರರು ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಸಂಬಂಧಿಸಿದ ಇಲಾಖೆಗಳ/ ಸಂಸ್ಥೆಗಳ ಅನುಮೋದನೆ ಪಡೆದುಕೊಳ್ಳತಕ್ಕದ್ದು;

...2)

-

2. M/s Global Tech Park Pvt. Ltd., ರವರು ಸೌರ ನೀತಿ 2014-21 ರನ್ವಯ ಈ ಬಾಬ್ತು ಅನ್ವಯಿಸುವ ಶುಲ್ಕ ಹಾಗೂ ಇತರ ಬ್ಯಾಂಕ್ ಖಾತರಿಯನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು;
3. ಪ್ರಸ್ತಾಪಿತ ಸೋಲಾರ್ ಘಟಕದಿಂದ ಉತ್ಪತ್ತಿಯಾಗುವ ವಿದ್ಯುತ್ತನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳಲು ಹಾಗೂ ಈ ಸಂಬಂಧ ಅಗತ್ಯವಿರುವ ವಿದ್ಯುತ್ ಜಾಲಕ್ಕೆ ಜೋಡಣೆ ಮಾಡಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಒಪ್ಪಂದ ಮಾಡಿಕೊಳ್ಳಲು ಅನುಮತಿಸಿದೆ;
4. M/s Global Tech Park Pvt. Ltd., ರವರು ಪ್ರಸ್ತಾಪಿತ ಸೌರ ವಿದ್ಯುತ್ ಘಟಕವನ್ನು ಸ್ಥಾಪಿಸಲು ಅಗತ್ಯವಿರುವ ಜಮೀನನ್ನು ಕರ್ನಾಟಕ ಭೂ-ಸುಧಾರಣೆ ಕಾಯ್ದೆಯನ್ವಯ ಖರೀದಿಸತಕ್ಕದ್ದು ಮತ್ತು ಸದರಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಕೊಂಡ ನಂತರವೇ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸತಕ್ಕದ್ದು;
5. M/s Global Tech Park Pvt. Ltd., ರವರು ಕಂಪನಿಯು ಸ್ಥಾಪಿಸುತ್ತಿರುವ ಈ ಸೌರ ವಿದ್ಯುತ್ ಘಟಕಕ್ಕೆ ಸರ್ಕಾರದ 2014-21 ರ ಸೋಲಾರ್ ನೀತಿ ಹಾಗೂ ಸರ್ಕಾರದ 2014-19 ರ ಕೈಗಾರಿಕಾ ನೀತಿಗಳ ಪ್ರಕಾರ ಅನ್ವಯವಾಗುವ ಸವಲತ್ತುಗಳು ಲಭ್ಯವಾಗುತ್ತವೆ.
6. ಪ್ರಸ್ತಾಪಿತ ಸೌರ ವಿದ್ಯುತ್ ಘಟಕವನ್ನು ಆದೇಶ ಹೊರಡಿಸಿದ ದಿನಾಂಕದಿಂದ 18 ತಿಂಗಳೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ರದ್ದು ಮಾಡುವ / ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎ.ಎ.ಚಪ್ಪರಬಂದ್),**
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,
22034674.

**ಇವರಿಗೆ:**
ಸಂಕಲನಕಾರರು, ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

**ಪ್ರತಿ:**

1 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ/ ಬಹುಮಹಡಿ ಕಟ್ಟಡ/ ವಿಕಾಸ ಸೌಧ, ಬೆಂಗಳೂರು-1.
2 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
3 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ.82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
4 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
5 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು-1.
6 ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.
7 ಉಪ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
8 ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.
9 M/s Global Tech Park Pvt. Ltd., No.11, Ground Floor, Oshaughnessy Road, Langford Town, Behind Hockey Stadium, Bangalore-560 025.
10 ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
11 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
12 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.